**ಓ.ಎಸ್‌ಃ 388-2022**

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 14.06.2023 ರಂದು ಪ್ರಮಾಣ ವಚನ ನೀಡಲಾಯಿತು.</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನು ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**<u>ಮುಖ್ಯವಿಚಾರಣೆಃ ವಾದಿ ಪರ ವಕೀಲರಿಂದ</u>**

2017-18 ನೇ ಸಾಲಿನ ಆಸ್ತಿ ತೆರಿಗೆಯ ಬೇಡಿಕೆ ಮತ್ತು ಸಂಗ್ರಹಣೆ ಬಾಕಿ ನಮೂನೆ-3 ನ್ನು ಹಾಜರುಪಡಿಸಿದ್ದು ನಿಪಿ 1 ಎಂದು, ದಿ. 05.04.2016 ರ ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 2 ಎಂದು , 2016-17 ನೇ ಸಾಲಿನ ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ನಮೂನೆ-2 ನ್ನು ಹಾಜರುಪಡಿಸಿದ್ದು ನಿಪಿ 3 ಎಂದು, 3 ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 4 ರಿಂದ 6 ಎಂದು, 2020-21 ನೇ ಸಾಲಿನ ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ನಮೂನೆ-2 ನ್ನು ಹಾಜರುಪಡಿಸಿದ್ದು ನಿಪಿ 7 ಎಂದು, 2 ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 8 ಮತ್ತು 9 ಎಂದು, 2019-20 ನೇ ಸಾಲಿನ ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ನಮೂನೆ-2 ನ್ನು ಹಾಜರುಪಡಿಸಿದ್ದು ನಿಪಿ 10 ಎಂದು, ದಿ. 05.04.2017 ರ ತೆರಿಗೆ ಪಾವತಿ ಚಲನನ್ನು ಹಾಜರುಪಡಿಸಿದ್ದು ನಿಪಿ 11 ಎಂದು, 2017-18 ನೇ ಸಾಲಿನ ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣ ನಮೂನೆ-2 ನ್ನು ಹಾಜರುಪಡಿಸಿದ್ದು ನಿಪಿ 12 ಎಂದು, ದಿ. 09.09.2022 ರ ಒಡಂಬಡಿಕೆ ಕರಾರಿನ ನೋಟರೀಕೃತ ಪ್ರತಿಯನ್ನು

ಹಾಜರುಪಡಿಸಿದ್ದು ನಿಪಿ 13 ಎಂದು, ದಿ. 31.01.2022 ರಂದು ಮುಖ್ಯ ಕಾರ್ಯಾಧಿಕಾರಿಗೆ ನೀಡಿದ ಅಹವಾಲನ್ನು ನಿಪಿ 14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ